ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 6, January-February 2026, Pp. 34-38
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಹೊಯ್ಸಳ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳು

**ಸವಿತ ಕೆ.ಎಸ್**

ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು

**Abstract:**

*ಕರ್ನಾಟಕ ಚರಿತ್ರೆಯಲ್ಲಿ ಹೊಯ್ಸಳರ ಆಳ್ವಿಕೆ ಒಂದು ಪ್ರಮುಖ ಹಾಗೂ ಸ್ಮರಣೀಯ ಅಧ್ಯಾಯವಾಗಿದೆ. ಕ್ರಿ.ಶ. 10ನೇ ಶತಮಾನದಲ್ಲಿ ಸಳನಿಂದ ಆವಿರ್ಭವಿಸಿದ ಹೊಯ್ಸಳ ರಾಜ್ಯವು ವಿನಯಾದಿತ್ಯನ ಕಾಲದಲ್ಲಿ ವಿಸ್ತಾರಕ್ಕೆ ಪಾದಾಂಕುರಗೊಂಡು ವಿಷ್ಣುವರ್ಧನ ಮತ್ತು ಬಲ್ಲಾಳನ ಕಾಲದಲ್ಲಿ ಬೃಹತ್ ಸಾಮ್ರಾಜ್ಯವಾಗಿ ರೂಪುಗೊಂಡಿತು. ಸುಮಾರು 3 ಶತಮಾನಗಳ ಕಾಲ ಆಳ್ವಿಕೆ ನಡೆಸಿದ ಹೊಯ್ಸಳ ಸಾಮ್ರಾಜ್ಯವನ್ನು ಸುಮಾರು 29 ಜನ ರಾಜ ಮಹಾರಾಜರು ಕರ್ನಾಟಕ ಮತ್ತು ತಮಿಳುನಾಡಿನ ಭಾಗಗಳನ್ನೊಳಗೊಂಡಂತೆ ಆಳ್ವಿಕೆ ನಡಸಿ ರಾಜಕೀಯ ಶಕ್ತಿಯಾಗಿ ಕರ್ನಾಟಕದ ಇತಿಹಾಸದಲ್ಲಿ ಬೆಳೆದರು. ದಕ್ಷ ಆಡಳಿತ, ಸರ್ವಧರ್ಮ ಸಹಿಷ್ಣುತೆ, ವಿಪುಲ ಸಾಹಿತ್ಯದ ರಚನೆ, ವೈಶಿಷ್ಟ್ಯಪೂರ್ಣ ಕಲೆಯ ಸೃಷ್ಟಿಯಿಂದ ಕರ್ನಾಟಕದ ಕೀರ್ತಿಯನ್ನು ಉತ್ತುಂಗ ಶಿಖರಕ್ಕೇರಿಸಿದ್ದಾರೆ.*

**Keywords:** *ಕರ್ನಾಟಕ ಇತಿಹಾಸ, ಹೊಯ್ಸಳ ಸಾಮ್ರಾಜ್ಯ, ಕಲೆ ಮತ್ತು ವಾಸ್ತುಶಿಲ್ಪ*

## ಪೀಠಿಕೆ

ಭಾರತೀಯ ಕಲೆ, ವಾಸ್ತುಶಿಲ್ಪ ಮತ್ತು ಶಿಲ್ಪಕಲಾ ಇತಿಹಾಸದಲ್ಲಿ ಹೊಯ್ಸಳರ ಕೊಡುಗೆಯು ಅದ್ವಿತೀಯವಾದುದ್ದಾಗಿದೆ. ಬಾದಾಮಿ ಚಾಲುಕ್ಯರು ಮತ್ತು ಕಲ್ಯಾಣಿ ಚಾಲುಕ್ಯರಿಂದ ಕರ್ನಾಟಕದಲ್ಲಿ ರೂಪುಗೊಂಡ ಕಲಾ ಶೈಲಿಯನ್ನು ಬಳುವಳಿಯಾಗಿ ಪಡೆದರೂ ಸಹ ತಮ್ಮದೇ ಆದ ವಿಶಿಷ್ಟಪೂರ್ಣವಾದ ಕಲಾ ಶೈಲಿಯನ್ನು ರೂಪಿಸಿದರು. ಇದು ಹೊಯ್ಸಳ ಶೈಲಿಯೆಂದೇ ಪ್ರಸಿದ್ಧಿಯಾಗಿದೆ. ಈ ಶೈಲಿಯಲ್ಲಿ 100ಕ್ಕೂ ಹೆಚ್ಚು ಶಿವ, ವೈಷ್ಣವ ದೇವಾಲಯಗಳನ್ನು ಮತ್ತು ಜೈನ ಬಸದಿಗಳನ್ನು ನಿರ್ಮಿಸಿ ಜಗದ್ವಿಖ್ಯಾತಿ ಗಳಿಸಿದ್ದಾರೆ. ಹೊಯ್ಸಳರ ಕಲಾಭಿರುಚಿಯ ಸ್ಮಾರಕಗಳಾಗಿ ಇಂದಿಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ನೆಲೆಗೊಂಡು ದೇಶ–ವಿದೇಶಿಯ ಪ್ರವಾಸಿಗರನ್ನು, ಕಲಾಪ್ರೇಮಿಗಳನ್ನು ಆಕರ್ಷಿಸುತ್ತಿದೆ.

ಬೇಲೂರಿನ ಚೆನ್ನಕೇಶವ ದೇವಾಲಯ ಮೊದಲನೆ ದೇವಾಲಯವಾದರೆ, ತುಮಕೂರಿನ ವಿಘ್ನಸಂತೆಯ ಲಕ್ಷ್ಮೀನರಸಿಂಹ ದೇವಾಲಯ ಕೊನೆಯದಾಗಿದೆ. ಬೇಲೂರಿನ ದೇವಾಲಯವನ್ನು ಒಳಗೂ, ಹಳೆಬೀಡಿನ ದೇವಾಲಯವನ್ನು ಹೊರಗೂ, ಹೊಸಹೊಳಲಿನ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯವನ್ನು ಒಳಗೂ ನೋಡಬೇಕೆಂಬ ಮಾತು ಅರ್ಥಗರ್ಭಿತವಾಗಿದೆ. ಹೊಯ್ಸಳ ಶಿಲ್ಪವು ಅಪೂರ್ವ ಕಲೆಯ ಬಲೆ, ಸೌಂದರ್ಯ ರಾಶಿ, ಮನಮೋಹಕ ದೃಶ್ಯಗಳಿಂದ ಕೂಡಿದೆ.

## ಹೊಯ್ಸಳರ ಕಲೆ ಮತ್ತು ವಾಸ್ತುಶಿಲ್ಪದ ಲಕ್ಷಣಗಳು

ಹೊಯ್ಸಳರು ತಮ್ಮ ದೇವಾಲಯಗಳ ನಿರ್ಮಾಣಕ್ಕೆ ನಸು ಹಸಿರು ಅಥವಾ ಕಪ್ಪು ನೀಲಿ ಛಾಯೆಯ ಕಲ್ಲನ್ನು ಬಳಸಿದ್ದಾರೆ. ಈ ಕಲ್ಲಿನ

***Please cite this article as:*** ಸವಿತ, ಕೆ.ಎಸ್. (2026). ಹೊಯ್ಸಳ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(6), 34–38

ವೈಶಿಷ್ಟ್ಯವೆಂದರೆ ಇದನ್ನು ಗಣಿಯಿಂದ ಹೊರತೆಗೆದಾಗ ಮೃದುವಾಗಿದ್ದು, ಕಾಲಕ್ರಮೇಣ ಸೂರ್ಯನ ಕಿರಣಗಳಿಂದ ಕಠಿಣ ಸ್ವರೂಪ ಪಡೆಯುತ್ತದೆ. ಆದುದರಿಂದ ಗೋಡೆಗಳ ಮೇಲೆ ಕುಸಿರಿನ ಸೂಕ್ಷ್ಮ ಕೆತ್ತನೆ ಕೆಲಸ ಮಾಡಲು ಸಾಧ್ಯವಾಯಿತು.

ಹೊಯ್ಸಳ ಶೈಲಿಯ ಪ್ರಮುಖ ದೇವಾಲಯಗಳ ಸ್ಥಳ ವಿನ್ಯಾಸವು ನಕ್ಷತ್ರಕಾರದಲ್ಲಿದ್ದು ಮೇಲಿನ ಕಟ್ಟಡವು ಅದೇ ವಿನ್ಯಾಸದಿಂದ ಕೂಡಿದೆ. ಈ ಕಾರಣದಿಂದ ಹೊಯ್ಸಳ ದೇವಾಲಯಗಳನ್ನು "ಅಷ್ಟ ಭದ್ರ ವಿನ್ಯಾಸ" ಎಂದು ಕರೆಯಲಾಗಿದೆ.

ಹೊಯ್ಸಳ ದೇವಾಲಯಗಳನ್ನು ಸಾಮಾನ್ಯವಾಗಿ ಭೂಮಟ್ಟದಿಂದ 4–5 ಅಡಿಗಳಷ್ಟು ಎತ್ತರವಾದ ಜಗಲಿಯ ಮೇಲೆ ಕಟ್ಟಲಾಗಿದೆ. ಜಗಲಿಯು ದೇವಾಲಯಕ್ಕಿಂತ ದೊಡ್ಡದಾಗಿದ್ದು, ನಕ್ಷತ್ರಾಕಾರರದಲ್ಲಿದ್ದು, ಪ್ರದಕ್ಷಣಾ ಪಥವನ್ನು ಹೊಂದಿದೆ. ಹೊಯ್ಸಳ ದೇವಾಲಯಗಳಲ್ಲಿ ಪುರುಷ ವಿಗ್ರಹಗಳಿಗಿಂತ ಸ್ತ್ರೀ ವಿಗ್ರಹಗಳ ಸಂಖ್ಯೆ ಹೆಚ್ಚು. ದೇವಾಲಯದ ಪ್ರಾಂಗಣದಲ್ಲಿ ಬಲಿಪೀಠ, ನಂದಿಪೀಠ, ಗರುಡಪೀಠ, ಧ್ವಜಸ್ತಂಭ ಮುಂತಾದವು ಇರುತ್ತವೆ.

ಹೊಯ್ಸಳ ದೇವಾಲಯಗಳು ಏಕಕೂಟದಿಂದ ಪಂಚಕೂಡದವರೆಗೂ ಇವೆ. ಬೇಲೂರಿನ ಚನ್ನಕೇಶವ ದೇವಾಲಯ, ಅಮೃತಪುರದ ಅಮೃತೇಶ್ವರ ದೇವಾಲಯ, ಹರಿಹರದ ಹರಿಹರೇಶ್ವರ ದೇವಾಲಯ, ಕೋರಮಂಡಲದ ಬೂಚೇಶ್ವರ ದೇವಾಲಯ, ಏಕಕೂಟವಾದರೇ, ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯ, ಬಳ್ಳಿಗಾವೆಯ ಕಲ್ಲೇಶ್ವರ ದೇವಾಲಯ ದ್ವಿಕೂಟ ದೇವಾಲಯಗಳಾದರೆ, ಸೋಮನಾಥಪುರದ ಕೇಶವ ದೇವಾಲಯ, ನಾಗಮಂಗಲದ ಸೌಮ್ಯಕೇಶವ ದೇವಾಲಯ, ನುಗ್ಗೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ ತ್ರಿಕೂಟವಾದರೇ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮೀ ದೇವಾಲಯ ಚತುಷ್ಕೂಟವಾದರೇ, ಗೋವಿಂದಹಳ್ಳಿಯ ಪಂಚಲಿಂಗೇಶ್ವರ ದೇವಾಲಯ, ಕಂಬದ ಹಳ್ಳಿಯ ಜೈನ ದೇವಾಲಯ ಪಂಚಕೂಟವಾಗಿದೆ.

ಹೊಯ್ಸಳರು ಬಳಸಿರುವ ಮುಖ್ಯ ವಾಸ್ತುಶಿಲ್ಪಶೈಲಿಗಳೆಂದರೆ ವೇಸರ, ದ್ರಾವಿಡ, ಕದಂಬ, ನಾಗರ ಪ್ರಕಾರಗಳನ್ನೋಳಗೊಂಡು "ಹೊಯ್ಸಳ ಶೈಲಿ" ಎಂದು ಹೆಸರಾಗಿದೆ. ಹೊಯ್ಸಳ ದೇವಾಲಯಗಳ ಗೋಡೆಗಳು ಅನೇಕ ಪಟ್ಟಿಕೆಗಳಾಗಿ ಆನೆ, ಕುದುರೆ, ಹೂ ಬಳ್ಳಿಗಳ ಸಾಲು, ರಾಮಾಯಣ, ಮಹಾಭಾರತ, ಭಾಗವತ ಮತ್ತು ಪೌರಾಣಿಕ ಕಥೆಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ಗೋಡೆಗಳು ಮತ್ತು ಚಾವಣಿ ಸಂದಿಸುವ ಭಾಗದಲ್ಲಿ ಶಿಲಾಬಾಲಕಿಯರ ವಿಗ್ರಹ ಗಳನ್ನು ಕೆತ್ತಲಾಗಿದೆ.

ದ್ರಾವಿಡ ಶೈಲಿಯಲ್ಲಿರುವಂತೆ ಹೊಯ್ಸಳ ಶೈಲಿಯಲ್ಲಿ ಬೃಹದಾಕಾರದ ಗೋಪುರಗಳಿರುವುದಿಲ್ಲ. ಶಿಖರವು ಗರ್ಭಗೃಹದ ಮೇಲ್ಭಾಗದಲ್ಲಿ ಪಿರಮಿಡ್ಡಿನ ಆಕಾರದಲ್ಲಿ ಹಂತ–ಹಂತವಾಗಿ ಅತಿ ಎತ್ತರವಿಲ್ಲದ ಶಿಲಾಕೃತಿಗಳಿಂದ ಆವೃತವಾದ ಗೋಪುರಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ದೇವಾಲಯವು ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪಗಳನ್ನು ಒಳಗೊಂಡಿದೆ. ಮುಖಮಂಟಪವು ಅನೇಕ ಕಂಬಗಳಿಂದ ಕೂಡಿದೆ. ದೇವಾಲಯದ ಮುಖ್ಯದ್ವಾರದ ಎರಡೂ ಕಡೆಗಳಲ್ಲೂ ದ್ವಾರಪಾಲಕರನ್ನು ಸುಂದರವಾಗಿ ಕೆತ್ತಲಾಗಿದೆ. ದೇವಾಲಯದ ಮೇಲ್ಛಾವಣಿಯ ಒಳಭಾಗವು ಸೂಕ್ಷ್ಮವಾಗಿ ಕೆತ್ತಿದ ಭುವನೇಶ್ವರಿ ವಿಗ್ರಹಗಳಿಂದ ಅಲಂಕೃತವಾಗಿದೆ. ಇವುಗಳ ಪ್ರತಿಯೊಂದು ಭಾವ ವಿನ್ಯಾಸವು ವಿಭಿನ್ನದಿಂದ ಕೂಡಿದೆ.

**ಬೇಲೂರಿನ ದೇವಾಲಯದ ಒಂದು ಕಿರು ನೋಟ**

ಯಗಚಿ ನದಿಯ ದಡದಲ್ಲಿರುವ, ಹಾಸನ ಜಿಲ್ಲೆಯ ಬೇಲೂರು ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲೊಂದು. ಹೊಯ್ಸಳರ ಕಾಲದ ಚನ್ನಕೇಶವ ದೇವಾಲಯ ಇಲ್ಲಿಯ ಮುಖ್ಯ

ಆಕರ್ಷಣೆ. ಸ್ಥಳ ಪುರಾಣ ಮತ್ತು ಐತಿಹ್ಯಗಳ ಮೇರೆಗೆ ಇದಕ್ಕೆ ಮೊದಲಿಗೆ ವೇಲಾಪುರ, ವೇಲೂರು, ವೇಲುಪುರ, ಬೇಲೂರು ಎಂದು ಕರೆಯಲಾಗಿದೆ. ಚನ್ನಕೇಶವಸ್ವಾಮಿ ದೇವಾಲಯ, ಕಪ್ಪೆ ಚನ್ನಿಗರಾಯ ದೇವಾಲಯ, ಸೌಮ್ಯನಾಯಕಿ ಅಮ್ಮನವರ ದೇವಾಲಯ, ಕಲ್ಯಾಣ ಮಂಟಪ, ವೀರನಾರಾಯಣ ದೇವಸ್ಥಾನ, ರಂಗನಾಯಕಿ ಅಮ್ಮನವರ ದೇವಸ್ಥಾನ, ಮಂಟಪಗಳ ಸಾಲು, ಚಿಕ್ಕ ಚಿಕ್ಕ ಗುಡಿಗಳು, ಶ್ರೀರಾಮದೇವರ ಗುಡಿ, ಪುಷ್ಕರಣಿ ಮೊದಲಾದ ಪಾವಿತ್ರ್ಯಗಳಿಂದ ಕೂಡಿದ ಇದನ್ನು ಅಭಿನವಷೋಣಿ, ವೈಕುಂಠ, ದಕ್ಷಿಣ ವಾರಣಾಸಿ ಎಂಬುದಾಗಿ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಹೊಯ್ಸಳ ಅರಸರು ಶಶಾಕಪುರ ಅಥವಾ ಸೊಸೆಯೂರು, ಬೇಲೂರು, ದ್ವಾರಸಮುದ್ರಗಳನ್ನು ತಮ್ಮ ರಾಜಧಾನಿಯನ್ನಾಗಿ ಹೊಂದಿದ್ದರು.

ಬೇಲೂರಿನ ವಿಜಯ ನಾರಾಯಣ ಚನ್ನಕೇಶವ ದೇವಾಲಯವು ಹೊಯ್ಸಳ ಶಿಲ್ಪಕಲೆಯ ಭಂಡಾರದಂತಿದೆ. ತಲಕಾಡಿನಲ್ಲಿದ್ದ ಚೋಳರ ಮೇಲಿನ ವಿಜಯದ ಸಂಕೇತವಾಗಿ ಕ್ರಿ.ಶ.1117ರಲ್ಲಿ ವಿಷ್ಣುವರ್ಧನನು ಈ ಭವ್ಯ ದೇಗುಲವನ್ನು ಕಟ್ಟಿಸಿದ್ದನು. ಅಲ್ಲದೆ ವಿಷ್ಣುವರ್ಧನ ರಾಮಾನುಜಚಾರ್ಯರಿಂದ ವೈಷ್ಣವ ಧರ್ಮ ಸ್ವೀಕರಿಸಿದ ನೆನಪಿನಾರ್ಥವಾಗಿ ಈ ಸ್ಮಾರಕವನ್ನು ನಿರ್ಮಿಸಿದನೆಂದು ಹೇಳಲಾಗಿದೆ. ವಿಷ್ಣುವರ್ಧನನು ದೇವರ ನಿತ್ತಯ, ನೈಮಿತ್ತಿಕ, ದಿವ್ಯಾಂಗ, ಭೋಗತ್ರಿಕಾಲ ನೈವೇದ್ಯ ಮುಂತಾದವುಗಳಿಗಾಗಿ ಹಲವಾರು ಗ್ರಾಮಗಳನ್ನು ದಾನ ನೀಡಿದನು.

ವಿಸ್ತಾರ, ಭವ್ಯತೆ ದೃಷ್ಟಿಯಿಂದ ಪ್ರಧಾನವಾದ ಚನ್ನಕೇಶವ ದೇವಾಲಯದ ವಿಸ್ತೀರ್ಣ ಪೂರ್ವ–ಪಶ್ಚಿಮವಾಗಿ 178 ಅಡಿ, ಉತ್ತರ–ದಕ್ಷಿಣವಾಗಿ 156 ಅಡಿ ಇದೆ. ಈ ಗುಡಿ 3–4 ಅಡಿ ಎತ್ತರದ ಜಗತಿಯ ಮೇಲೆ ನಿಂತಿದೆ. ಕಟ್ಟಡದ ನಿರ್ಮಾಣದಲ್ಲಿ ಬಳಸಲಾದ ಮೃದುವಾದ ಬಳಪದ ಕಲ್ಲು ಕೆತ್ತನೆಗೆ ಅನುಕೂಲಕರವಾದರೂ ಹೆಚ್ಚು ಭಾರವಾದ ಎತ್ತರವಾದ ಕಟ್ಟಡದ ನಿರ್ಮಾಣಕ್ಕೆ ಅಷ್ಟು ಉಪಯುಕ್ತವಲ್ಲದ ಕಾರಣ ದೇವಾಲಯಕ್ಕೆ ಎತ್ತರವನ್ನುಂಟುಮಾಡಲು ಜಗತಿಯನ್ನು ನಿರ್ಮಿಸಿರುವಂತೆ ತೋರುತ್ತದೆ. ಗರ್ಭಗುಡಿಯ ಮೇಲಿನ ಶಿಖರದ ಭಾರವನ್ನು ಹೊರುವ ಸಲುವಾಗಿ ವಿಮಾನದ ಗೋಡೆಗಳನ್ನು ಬಹಳ ದಪ್ಪವಾಗಿ ಕಟ್ಟಿದ್ದಾರೆ. ಆದರೂ ಅನೇಕ ಭಾರಿ ಕೇಶವ ದೇವಾಲಯದ ಶಿಖರ ಬಿದ್ದುದಲ್ಲದೆ 1381ರಲ್ಲಿ ನವರಂಗದ ಛಾವಣಿ ಸಹ ಶಿಥಿಲವಾಗಿದ್ದುದರಿಂದ ದುರಸ್ಥಿಗೊಳಿಸಲಾಯಿತು. ಈಗ ದೇವಾಲಯದ ಮೇಲೆ ಶಿಖರವಿಲ್ಲ.

ಏಕಕೂಟ ಚನ್ನಕೇಶವ ದೇವಾಲಯ ನಕ್ಷತ್ರಾಕಾರ ತಳವಿನ್ಯಾಸ ಹೊಂದಿದ್ದು, 443 ಅಡಿ ಉದ್ದ 396 ಅಡಿ ಅಗಲದ ಪ್ರಾಂಗಣ ಹೊಂದಿದೆ. ಈ ದೇವಾಲಯವು ಗರ್ಭಗುಡಿ, ಸುಖನಾಸಿ, ಕಂಬಗಳಿಂದ ಕೂಡಿದ ನವರಂಗ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಗರ್ಭಗುಡಿಯಲ್ಲಿ ಚನ್ನಕೇಶವ ಒಂದು ಮಹೋನ್ನತ ಕಲಾಕೃತಿಯಾಗಿದೆ. 6 ಅಡಿ ಎತ್ತರದ ಈ ಮೂರ್ತಿಯು 3 ಅಡಿ ಪೀಠದ ಮೇಲೆ ನಿಂತಿದೆ. ಶಂಕ, ಚಕ್ರ, ಗದಾ, ಪದ್ಮಾರಿಯಾದ ಈ ವಿಗ್ರಹದ ಎರಡು ಪಾರ್ಶ್ವಗಳಲ್ಲಿ ಶ್ರೀದೇವಿ–ಭೂದೇವಿಯರ ವಿಗ್ರಹಗಳಿವೆ.

ನವರಂಗ ಮಂಟಪದಲ್ಲಿ ಸುಂದರ ಹಾಗು ಸುವಿಸ್ತಾರವಾಗಿ ಕೆತ್ತಲ್ಪಟ್ಟಿರುವ ಕಂಬಗಳಿವೆ. ಇವುಗಳಲ್ಲಿ "ನರಸಿಂಹ ಕಂಬ ಮತ್ತು ಮೋಹಿನಿ ಕಂಬ" ಪ್ರಮುಖವಾಗಿವೆ. ನರಸಿಂಹ ಕಂಬದ ಮೇಲೆ ಕಡಲೆಕಾಳಿನ ಗಾತ್ರದ "ಕಡಲೆ ಬಸವಣ್ಣ" ಇದೆ. ನವರಂಗದ ದ್ವಾರಗಳ ಮುಂಭಾಗದಲ್ಲಿರುವ ಭುವನೇಶ್ವರಿಗಳಲ್ಲಿ ಅಷ್ಟದಿಕ್ಪಾಲಕರ ವಿಗ್ರಹಗಳನ್ನು ನೋಡಬಹುದು. ನವರಂಗದಲ್ಲಿ ಗೋಡೆಗಳಲ್ಲಿ ಸೇರಿಕೊಂಡಿರುವುದನ್ನು ಬಿಟ್ಟು 42 ಕಂಬಗಳಿವೆ. ಇವುಗಳಲ್ಲಿ ಭುವನೇಶ್ವರಿಗೆ ಆಧಾರವಾಗಿರುವ ಮಧ್ಯದ 4 ಕಂಬಗಳನ್ನುಳಿದು ಉಳಿದೆಲ್ಲವು ಬೇರೆ ಬೇರೆ

ಆಕಾರ ಮತ್ತು ಅಲಂಕರಣಗಳಿಂದ ಕೂಡಿದೆ. ನವರಂಗದ ಭುವನೇಶ್ವರಿಗೆ ಆಧಾರವಾಗಿರುವ ಒಂದೇ ಮಾದರಿಯ 4 ಕಂಬಗಳನ್ನು ಸುಂದರವಾದ ಕೆತ್ತನೆಗಳಿಂದ ಅಲಂಕರಿಸಲಾಗಿದೆ. ನವರಂಗದ ಮಧ್ಯದ ಭುವನೇಶ್ವರಿ ಅತ್ಯಂತ ಸುಂದರ ಕೆತ್ತನೆಗಳಿಂದ ಕೂಡಿದ್ದು ಗುಮ್ಮಟಾಕಾರದ ಈ ಭುವನೇಶ್ವರಿ 10 ಅಡಿ ಸುತ್ತಳತೆ ಮತ್ತು 6 ಅಡಿ ಆಳವುಳ್ಳದ್ದಾಗಿದೆ. ಇದರಲ್ಲಿರುವ 17 ಚಿತ್ರಪಟಿಕೆಗಳಲ್ಲಿ ಸಂಗೀತ, ನೃತ್ಯ, ಮಲ್ಲಯುದ್ಧ, ಕೋಲಾಟಗಳ ಮತ್ತು ರಾಮಾಯಣ, ಮಹಾಭಾರತ, ಭಾಗವತದ ಕಥೆಗಳ ದೃಶ್ಯಗಳು ಮತ್ತು ವಿಷ್ಣುವಿನ ಅವತಾರದ ಶಿಲ್ಪಗಳು ಇವೆ.

ಜಗತಿಯಾಕಾರದಲ್ಲಿರುವ ನವರಂಗದ ಹೊರಗೋಡೆಗಳ ಮೇಲೆ ಬುಡದಿಂದ 8 ಅಡ್ಡ ಪಟ್ಟಿಕೆಗಳಿವೆ. ಅವುಗಳೆಂದರೆ

1. ವಿವಿಧ ಭಂಗಿಗಳಲ್ಲಿ ಚಲಿಸುತ್ತಿರುವ ಆನೆಗಳು
2. ಮಣಿಹಾರಗಳಿಂದ ಅಲಂಕೃತವಾದ ಪಟ್ಟಿಕೆಯ ಮೇಲೆ ಸಿಂಹಮುಖಗಳು
3. ಲತಾಬಳ್ಳಿಗಳಿಂದಾದ ವೃತ್ತಗಳ ಮಧ್ಯೆ ಇರುವ ಮಾನವ, ಪ್ರಾಣಿ ಮತ್ತು ಪಕ್ಷಿಗಳ ಸಣ್ಣ ಸಣ್ಣ ಚಿತ್ರಗಳು
4. ಮಣಿಹಾರಗಳಿಂದ ಅಲಂಕೃತವಾದ ಪಟ್ಟಿಕೆ
5. ಅಲಂಕೃತವಾದ ಗೂಡುಗಳಲ್ಲಿ ನೃತ್ಯ, ಸಂಗೀತ, ಶೃಂಗಾರಮಗ್ನರಾದ ಹಲವು ಸ್ತ್ರೀ ವಿಗ್ರಹಗಳು, ಪುರುಷ ವಿಗ್ರಹಗಳು ಮತ್ತು ಯಕ್ಷರ ಪ್ರತಿಮೆಗಳಿವೆ
6. ಸಣ್ಣ ಕಂಬಗಳ ಮಧ್ಯೆ ಸೂಕ್ಷ್ಮವಾಗಿ ಕೆತ್ತಲಾದ ಅನೇಕ ಸ್ತ್ರೀ ವಿಗ್ರಹಗಳು
7. ಲತೆಗಳ ಮೇಲೆ ಕೆತ್ತಲಾದ ಸಿಂಹಮುಖಗಳ ಮಧ್ಯೆ ಸಣ್ಣ ಶಿಖರಗಳು ಮತ್ತು ಸೂಕ್ಷ್ಮ ಮಾನವ ಶಿಲ್ಪಗಳು ಇವೆ
8. ಸಣ್ಣ ಜೋಡು ಕಂಬಗಳ ಮಧ್ಯೆ ಚಿತ್ರಶಿಲ್ಪಗಳನ್ನು ಬಿಡಿಸಲಾಗಿದೆ

ದಾಸೋಜ, ಚಾವನ, ಚಿಕ್ಕಹಂಪ, ಮಲ್ಲಿಯಣ್ಣ, ಪದರಿ ಮಲ್ಲೋಜ, ನಾಗೋಜ, ಕೇಶವದೇವ, ಮಲ್ಲತಮ್ಮ ಮುಂತಾದ ಶಿಲ್ಪಿಗಳು ತಮ್ಮ ಕೈಚಳಕದಿಂದ ಸಾವಿರಾರು ಸುಂದರ ಶಿಲ್ಪ ಮೂರ್ತಿಗಳಿಂದ ಆವೃತವಾದ ಈ ದೇವಾಲಯವನ್ನು ನಿರ್ಮಿಸಿದ್ದಾರೆ. ಡಾ.ಎಂ.ಹೆಚ್.ಕೃಷ್ಣರವರು ಈ ದೇವಾಲಯವನ್ನು "ಲಲಿತ ಕಲಾ ವಸ್ತು ಸಂಗ್ರಹಾಲಯ" ಎಂದು ಕರೆದಿದ್ದಾರೆ.

"ಬೇಲೂರು ಮತ್ತು ಹಳೆಬೀಡಿನ ದೇವಾಲಯಗಳಲ್ಲಿರುವಷ್ಟು ಕುಸುರಿ ಕೆಲಸದ ಶಿಲ್ಪ ಕಲಾಕೃತಿಗಳು ಪ್ರಪಂಚದ ಬೇರೆ ದೇವಾಲಯಗಳಲಿಲ್ಲ" ಎಂದು ಡಾ. ಜೇಮ್ಸ್ ಫರ್ಗುಷನ್ ತಿಳಿಸಿದ್ದಾರೆ.

**ತೊಣ್ಣೂರಿನ ದೇವಾಲಯಗಳ ಒಂದು ಪಕ್ಷಿ ನೋಟ**

ಹೊಯ್ಸಳರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದ ತೊಣ್ಣೂರು, ಶ್ರೀ ರಾಮಾನುಜಾಚಾರ್ಯರು ಮತ್ತು ಅವರ ಅನುಯಾಯಿಗಳಿಂದಾಗಿ, ತನ್ನ ಹೆಸರನ್ನೂ ಹಾಗೂ ಈಗಿನ ಖ್ಯಾತಿಯನ್ನೂ ಪಡೆದಿದೆ. ಶ್ರೀರಾಮಾನುಜರು ಹೊಯ್ಸಳ ವಿಷ್ಣುವರ್ಧನನನ್ನು ಈ ಊರಿನಲ್ಲೇ ಮೊಟ್ಟ ಮೊದಲ ಬಾರಿಗೆ ಭೇಟಿಯಾದರೆಂದು ಪ್ರತೀತಿ. ಶಾಸನಗಳಲ್ಲಿ ತೊಣ್ಣೂರನ್ನು ತೊಂಡನೂರು, ತೊಂಡನೂರು ಅಗ್ರಹಾರ, ಯಾದವಗಿರಿ, ಯಾದವಪುರ ಮತ್ತು ಯಾದವನಾರಾಯಣ ಚತುರ್ವೇದಿಮಂಗಲ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಇದು ಹೊಯ್ಸಳರ ಒಂದು ಪ್ರಾಂತೀಯ ರಾಜಧಾನಿಯಾಗಿತ್ತೆಂದು, ವಿಷ್ಣುವರ್ಧನನು ಯುವರಾಜನಾಗಿದ್ದಾಗ ತೊಣ್ಣೂರಿನಿಂದ ರಾಜ್ಯವಾಳುತ್ತಿದ್ದನೆಂದೂ ಹೇಳಲಾಗಿದೆ.

ತೊಣ್ಣೂರು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲೇ ಒಂದು ಅಪೂರ್ವ ನೆಲೆ. ಕನ್ನಡ ನಾಡಿನಲ್ಲಿ, ಕನ್ನಡ ರಾಜವಂಶದ ನೆರಳಿನಲ್ಲಿ, ಸಂಪೂರ್ಣ ತಮಿಳು ಸಂಸ್ಕೃತಿಯ ನೆಲೆಯಾಗಿದ್ದ ತೊಣ್ಣೂರಿನಲ್ಲಿ ತಮಿಳು ಸಮುದಾಯವೊಂದು

ಶಾಂತಿಯಿಂದ ಸಹಬಾಳ್ವೆ ನಡೆಸಿದ ಸಂಗತಿ ನಿಜಕ್ಕೂ ಪ್ರಶಂಸನೀಯ. ಕನ್ನಡ ನಾಡಿನಲ್ಲಿ ಹೊಯ್ಸಳ ರಾಜ್ಯದ ಕೇಂದ್ರ ಭಾಗದಲ್ಲಿ, ತಮಿಳು ಸಂಸ್ಕೃತಿಯನ್ನೂ, ತಮಿಳು ಭಾಷೆಯನ್ನೂ, ತಮಿಳು ವಾಸ್ತುಶೈಲಿಯನ್ನೂ, ತಮಿಳು ಶಿಲ್ಪಿಗಳಿಂದ ಕಟ್ಟಿದ ದೇವಾಲಯಗಳನ್ನೂ, ತಮಿಳುನಾಡಿನ ಪೋಷಕರನ್ನೂ, ತಮಿಳು ಪೂಜಾವಿಧಾನ ಆಚರಣೆಗಳನ್ನೂ, ತಮಿಳು ಹೆಸರನ್ನೂ ಹೊಂದಿದ್ದಂತಹ ಏಕೈಕ ತಮಿಳು ನೆಲೆ ಇದಾಗಿತ್ತು. ಇಂತಹ ಒಂದು ತಮಿಳುಮಯವಾದ ನೆಲೆ ಕರ್ನಾಟಕದಲ್ಲಿ ಹೊಯ್ಸಳ ರಾಜ್ಯದ ಕೇಂದ್ರಭಾಗದಲ್ಲಿ 2 ಶತಮಾನಗಳ ಕಾಲ ನೆಮ್ಮದಿಯಿಂದ ಇತ್ತೆಂಬ ವಿಚಾರ ನಿಜಕ್ಕೂ ಹೆಮ್ಮೆ ಪಡುವಂಥದ್ದು, ಅನುಕರಣೀಯವಾದದ್ದು. ಇಂತಹ ಸಂಗತಿ ಇಡೀ ದಕ್ಷಿಣ ಭಾರತದ ಇತಿಹಾಸದಲ್ಲಿ ಎಲ್ಲೂ ಕಂಡು ಕೇಳಬರದಿರುವುದು, ಕನ್ನಡಿಗರ ಔದಾರ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ತೊಣ್ಣೂರಿನಲ್ಲಿ 4 ಪ್ರಮುಖ ದೇವಾಲಯಗಳಿವೆ. ಇದರಲ್ಲಿ 3 ವೈಷ್ಣವ ಪಂಥದ್ದು, 1 ಶೈವ ಪಂಥದ್ದು. ಅವುಗಳೆಂದರೆ,

- ನಂಬಿನಾರಾಯಣ ಅಥವಾ ಲಕ್ಷ್ಮಿನಾರಾಯಣ ದೇವಾಲಯ
- ಯೋಗನರಸಿಂಹ ದೇವಾಲಯ
- ಕೃಷ್ಣ ದೇವಾಲಯ
- ಕೈಲಾಸೇಶ್ವರ ದೇವಾಲಯ

ಈ ದೇವಾಲಯಗಳನ್ನು ಕಂದು ಅಥವಾ ಬೂದು ಬಣ್ಣದ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದಾರೆ. ಈ ದೇವಾಲಯಗಳು ಸರಳವಾದ ಹೆಚ್ಚು ಶಿಲ್ಪಾಲಂಕಾರಗಳಿಲ್ಲದ ದೇವಾಲಯಗಳಾಗಿವೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡು ಈ ದೇವಾಲಯಗಳು ಹೆಚ್ಚು ತಮಿಳು ವಾಸ್ತು ಪರಂಪರೆಯಲ್ಲೇ ಮೈದಳೆದಿವೆ. ತೊಣ್ಣೂರಿನ ದೇವಾಲಯಗಳ ನಿರ್ಮಾಣದಲ್ಲಿ ಹೊಯ್ಸಳ–ದ್ರಾವಿಡ ಮತ್ತು ಚೋಳ–ದ್ರಾವಿಡ ಶೈಲಿಗಳನ್ನು ಗುರುತಿಸಲಾಗಿದೆ. ತೊಣ್ಣೂರಿನ ದೇವಾಲಯಗಳ ಶಿಲ್ಪಗಳು ಲಕ್ಷಣಗಳಲ್ಲಿ ಗಿಡ್ಡಗಿದ್ದು ಒರಟಾಗಿವೆ.

**ಉಪಸಂಹಾರ:**

ಕರ್ನಾಟಕವನ್ನು ಆಳಿದ ಹೊಯ್ಸಳರ ಕೊಡುಗೆ ಕರ್ನಾಟಕದ ಸಂಸ್ಕೃತಿಗೆ ಅತ್ಯಮೂಲ್ಯವಾದುದ್ದು. ಹೊಯ್ಸಳರು ವಿಶಾಲ ಸಾಮ್ರಾಜ್ಯ ನಿರ್ಮಿಸಿ, ಅದಕ್ಕೆ ಅನುಗುಣವಾದ ದಕ್ಷ ಆಡಳಿತ ರೂಪಿಸಿದ್ದರು. ಇವರ ಕಾಲದಲ್ಲಿ ರಾಮಾನುಜಚಾರ್ಯರ ನೇತೃತ್ವದಲ್ಲಿ ವೈಷ್ಣವ ಧರ್ಮ ಪ್ರಗತಿ ಹೊಂದಿ, ಅನೇಕ ವೈಷ್ಣವ ದೇವಾಲಯಗಳು ನಿರ್ಮಾಣಗೊಂಡು, ಆ ಮೂಲಕ "ಹೊಯ್ಸಳ ಶೈಲಿ" ಪ್ರಗತಿ ಹೊಂದಿ, ಕಲೆ ಮತ್ತು ವಾಸ್ತುಶಿಲ್ಪದ "ಸುವರ್ಣಯುಗ" ಎಂಬ ಹೆಗ್ಗಳಿಕೆಗೆ ನಾಂದಿಯಾಗಿದೆ. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಸಾಹಿತ್ಯ ಕ್ಷೇತ್ರ ಪ್ರಗತಿ ಹೊಂದಿತು. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದಂತೆ ಈ ಲೇಖನದಲ್ಲಿ ಹೊಯ್ಸಳರ ಕಲಾಶೈಲಿಯ ಲಕ್ಷಣಗಳು, ಚನ್ನಕೇಶವ ದೇವಾಲಯದ ಬಗ್ಗೆ ಹಾಗೂ ತೊಣ್ಣೂರಿನ ಬಗ್ಗೆ ತಿಳಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**


- *ಕನ್ನಡ ವಿಷಯ ವಿಶ್ವಕೋಶ–ಇತಿಹಾಸ ಮತ್ತು ಪುರಾತತ್ವ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
- ಕೆ.ಎನ್.ಎ. *ಸಮಗ್ರ ಕರ್ನಾಟಕದ ಇತಿಹಾಸ.*
- ಮಹದೇವ, ಸಿ. (ಸಂ.). *ತೊಣ್ಣೂರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ನಂಜುಂಡಸ್ವಾಮಿ, ಎ.ಎಸ್. *ಹೊಯ್ಸಳರ ಇತಿಹಾಸ*
- ಸದಾಶಿವ, ಕೆ. *ಸಮಗ್ರ ಭಾರತದ ಇತಿಹಾಸ*
- ಸರಸ್ವತಿ, ಎನ್ & ಎನ್.ಸಾವಿತ್ರಿ. *ಹೊಯ್ಸಳರ ಕಾಲದ ಸಾಂಸ್ಕೃತಿಕ ಕೊಡುಗೆಗಳು*
- ಶ್ರೀಕಂಠಶಾಸ್ತ್ರಿ, ಎಸ್. *ಹೊಯ್ಸಳರ ವಾಸ್ತುಶಿಲ್ಪ*